**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1088/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ಜಯಕುಮಾರ್ ಎನ್ | ಪ್ರಾಸಾಃ 7 |
| ತಂದೆಯ ಹೆಸರು | | ಆರ್ ನಾಗರಾಜು | ಚಾಸಾಃ 12 |
| ವಯಸ್ಸು | | 43 ವರ್ಷ | |
| ಕೆಲಸ | | ಪೊಲೀಸ್ ನಿರೀಕ್ಷಕರು, ಚೆಸ್ಕಾಮ್ ಜಾಗೃತ ದಳ, ಮಡಿಕೇರಿ ಕೊಡಗು | ಸಾ ಪ್ರ ಬೋ |
| ವಾಸ | | ಮಡಿಕೇರಿ | ದಿಃ 16.07.2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಹುಲ್ಲಹಳ್ಳಿ ಪೋಲಿಸ್ ಠಾಣೆಯಲ್ಲಿ ಸೆಪ್ಟೆಂಬರ್, 2012 ರಿಂದ ಏಪ್ರಿಲ್, 2015 ರವರೆಗೂ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 29.06.2014 ರಂದು ಎ.ಎಸ್.ಪಿ ನಂಜನಗೂಡು ರವರ ಆದೇಶದಂತೆ ಬದನವಾಳು ಪೊಲೀಸ್ ಠಾಣಾ ವ್ಯಾಪ್ತಿಯ ಅಳಗಂಚಿ ಬಿ.ಎ.ಎಸ್ ಕಾರ್ಖಾನೆಯಲ್ಲಿ ಬಂದೊಬಸ್ತ್ ಕರ್ತವ್ಯಕ್ಕೆ ನಿಯೋಜಿಸಿದ್ದು, ಅದಂತರೆ ರಾತ್ರಿ ಕರ್ತವ್ಯದಲ್ಲಿ ಇದ್ದಾಗ, ಚಾಸಾ1, 13, 14, 17 ಮತ್ತು ಸಶಸ್ತ್ರ ಪಡೆಯ ಸಿಬ್ಬಂಧಿಗಳು ಕೂಡ ಇದ್ದರು. ಅದರಂತೆ ಮಧ್ಯರಾತ್ರಿ 3 ಗಂಟೆ ಸಮಯದಲ್ಲಿ ಕಚ್ಚಾ ಹಾಗೂ ಮಿಷನರಿ ಸಾಮಗ್ರಿಗಳನ್ನು ತುಂಬಿದ್ದ 4 ಲಾರಿಗಳನ್ನು ಹೊರ ಕಳುಹಿಸಲು ರಕ್ಷಣೆ ನೀಡಬೇಕೆಂದು ಆಡಳಿತ ಮಂಡಳಿಯವರು ಕೋರಿಕೊಂಡಿದ್ದು, ಆ ಪ್ರಕಾರ ನಾವು ಮುಖ್ಯ ದ್ವಾರದ ಬಳಿ ಹೋದಾಗ ಬೆಳಗಿನ ಜಾವ 4 ಗಂಟೆ ಸಮಯದಲ್ಲಿ 1, 2 ಮತ್ತು ಇತರೆ ಆರೋಪಿತರು ಲಾರಿಗಳನ್ನು ತಡೆದು, ವಾಹನಗಳನ್ನು ಹತ್ತಿ ಚಾಲಕರ ಮೇಲೆ ಹಲ್ಲೆ ಮಾಡಿ, ಸೆಕ್ಯೂರಿಟಿ office ಗೆ ನುಗ್ಗಿ ಚಾಸಾ 2 ರವರ ಮೇಲೆ ಹಲ್ಲೆ ಮಾಡಿ, ಸರ್ಕಾರಿ ಕರ್ತವ್ಯದಲ್ಲಿ ಇದ್ದ ಪೊಲೀಸ್ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಗಳ ಮೇಲೆ ಅಕ್ರಮ ಗುಂಪು ಕಟ್ಟಿಕೊಂಡು, ಅವಾಚ್ಯ ಶಬ್ದಗಳಿಂದ ನಿಂದಿಸಿ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಕೊಲೆ ಬೆದರಿಕೆ ಹಾಕಿರುತ್ತಾರೆ. ಆರೋಪಿತರುಗಳು ಸದರಿ 4 ಲಾರಿಗಳನ್ನು ಪುನಃ ಕಾರ್ಖಾನೆಯ ಒಳಗೆ ಕಳುಹಿಸಿರುತ್ತಾರೆ. ಪ್ರಕರಣದ ಸಂಬಂದ ನಾನು ತನಿಖಾಧಿಕಾರಿಯ ಮುಂದೆ ಹೇಳಿಕೆ ನೀಡಿದ್ದೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರಿದ್ದು, ಪ್ರಾಜ್ಞ ಆರೋಪಿತರ ಪರ ವಕೀಲರು ಆರೋಪಿತರ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಎಸ್.ಕೆ ವಕೀಲರಿಂದ:**

ನನಗೆ ವೈರ್ ಲೆಸ್ ಮುಖಾಂತರ ಬಿ.ಎ.ಎಸ್ ಕಾರ್ಖಾನೆಗೆ ಭದ್ರತೆಗಾಗಿ ನಿಯೋಜಿಸಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ನಾನು ದಿ:29.06.2014 ರಂದು ರಾತ್ರಿ 9 ರಿಂದ 10 ಗಂಟೆಯ ವೇಳೆಗೆ ಬಿ.ಎ.ಎಸ್ ಕಾರ್ಖಾನೆಗೆ ಹೋಗಿರುತ್ತೇನೆ. ಸದರಿ ಕಾರ್ಖಾನೆಯಲ್ಲಿ ರಾತ್ರಿ ಪಾಳಿಯಲ್ಲಿ ಎಷ್ಟು ಜನ ಕರ್ತವ್ಯ ನಿರ್ವಹಿಸುತ್ತಾರೆ ನನಗೆ ಗೊತ್ತಿಲ್ಲ. ಬಿ.ಎ.ಎಸ್ ಕಾರ್ಖಾನೆಯ ಯಾವ ಅಧಿಕಾರಿ ಲಾರಿಯನ್ನು ತಡೆದಿರುತ್ತಾರೆ ಎಂದು ನಿಮಗೆ ತಿಳಿಸಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸ್ಥಳಿಯ ಠಾಣಾ ಸಿಬ್ಬಂದಿಗೆ ತಿಳಿಸಿರುತ್ತಾರೆ ಆದರೆ ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕಾರ್ಖಾನೆಯ ಮುಖ್ಯ ದ್ವಾರದ ಬಳಿ ಸುಮಾರು 22 ರಿಂದ 25 ಜನ ಪ್ರತಿಭಟನೆ ಮಾಡುತ್ತಿದ್ದರು. ಪ್ರತಿಭಟನೆ ಮಾಡುತ್ತಿದ್ದಾಗ ಗುರುತಿನ ಚೀಟಿಯನ್ನು ನೋಡಿಲ್ಲ. ಆರೋಪಿತರು ಯಾರು ಕೂಡ ರಾತ್ರಿ 10 ರಿಂದ ಬೆಳಗಿನ ಜಾವ 5 ರವರೆಗೆ ಕಾರ್ಖಾನೆಯ ಮುಖ್ಯ ದ್ವಾರದ ಬಳಿ ಯಾವುದೇ ಪ್ರತಿಭಟನೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಲಾರಿ ಚಾಲಕರು ಮತ್ತು ಭದ್ರತಾ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದಾಗ ಅವರುಗಳಿಗೆ ಎಲ್ಲೆಲ್ಲಿ ಪೆಟ್ಟು ಆಗಿದೆ ಎಂದು ಗೊತ್ತಿಲ್ಲ. ನನ್ನ ಹೇಳಿಕೆಯಲ್ಲಿ ಲಾರಿ ಸಂಖ್ಯೆಗಳು ಮತ್ತು ಲಾರಿ ಚಾಲಕರ ಹೆಸರುಗಳನ್ನು ಹೇಳಿದ್ದೇನೆ. ಯಾವುದೇ ಲಾರಿಗಳು ಮುಖ್ಯ ದ್ವಾರದ ಬಳಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ 2 ರವರ ಮೇಲೆ ಯಾವುದೇ ರೀತಿಯ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಮುಖ್ಯ ದ್ವಾರದ ಬಳಿ ಹೋದಾಗ ಬೆಳಗಿನ ಜಾವ 4 ಗಂಟೆ ಸಮಯದಲ್ಲಿ 1, 2 ಮತ್ತು ಇತರೆ ಆರೋಪಿತರು ಲಾರಿಗಳನ್ನು ತಡೆದು, ವಾಹನಗಳನ್ನು ಹತ್ತಿ ಚಾಲಕರ ಮೇಲೆ ಹಲ್ಲೆ ಮಾಡಿ, ಸೆಕ್ಯೂರಿಟಿ office ಗೆ ನುಗ್ಗಿ ಚಾಸಾ 2 ರವರ ಮೇಲೆ ಹಲ್ಲೆ ಮಾಡಿ, ಸರ್ಕಾರಿ ಕರ್ತವ್ಯದಲ್ಲಿ ಇದ್ದ ಪೊಲೀಸ್ ಸಿಬ್ಬಂದಿ ಮತ್ತು ಭದ್ರತಾ ಸಿಬ್ಬಂದಿಗಳ ಮೇಲೆ ಅಕ್ರಮ ಗುಂಪು ಕಟ್ಟಿಕೊಂಡು, ಅವಾಚ್ಯ ಶಬ್ದಗಳಿಂದ ನಿಂದಿಸಿ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಾರಿಗಳನ್ನು ಆರೋಪಿತರು ಹಿಂದಕ್ಕೆ ಕಳುಹಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**